**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1868 / 2024**

**ಚಾಸಾ ಃ- 03 / ಪ್ರಾಸಾ ಃ- 07**

| | |
|---|---|
| ಹೆಸರು | ರಾಣಿ |
| ಗಂಡನ ಹೆಸರು | ನರಸಿಂಹಯ್ಯ |
| ವಯಸ್ಸು | 47 |
| ಉದ್ಯೋಗ | ವ್ಯವಸಾಯ |
| ವಿಳಾಸ | ದಂಡಿಗೆಪುರ |

**ದಿನಾಂಕಃ 06.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1 , 2, 4 ಮತ್ತು 5 ರವರು ಪರಿಚಯ ಇರುತ್ತಾರೆ. ಆರೋಪಿಗಳು ಗೊತ್ತು. ಒಂದು ವರ್ಷದ ಹಿಂದೆ ನಾನು ಮತ್ತು ನನ್ನ ಯಜಮಾನರಾದ ಚಾಸಾ2 ರವರು ಸಂಜೆ 6.30 ಗಂಟೆಗೆ ಮನೆಯ ಹತ್ತಿರ ಇದ್ದಾಗ ಚಾಸಾ 1 ರವರಾದ ರಾಜಮ್ಮ ರವರು ಮನೆಗೆ ಬಂದರು. ಆಗ ನಾವು ಏನು ಎಂದು ಕೇಳಿದೆವು. ಆಗ ಚಾಸಾ 1ರವರು ತಿಲಕ್ ಎಂಬುವವರು ಹೊಡೆದಿರುತ್ತಾರೆ ಎಂದು ತಿಳಿಸಿದರು. ಆಗ ನಾನು ಮತ್ತು ಚಾಸಾ 2 ರವರು ಸದರಿ ತಿಲಕ್ ರವರ ಮನೆಯ ಹತ್ತಿರ ಹೋಗಿ ಏಕೆ ಹೊಡೆದಿರುತ್ತೀರಿ ಎಂದು ಕೇಳಿದೆವು. ಆಗ ತಿಲಕ್ ರವರು ನಮ್ಮ ಮುಂದೆಯೆ ಚಾ 1 ರವರ ಕಪಾಳಕ್ಕೆ ಹೊಡೆದರು. ಆಗ ಚಾಸಾ 1 ರವರು ರೋಡಿನಲ್ಲಿ ಬಿದ್ದು ಒಳ್ಳಾಡಿರುತ್ತಾರೆ. ನಮ್ಮ ಮುಂದೆಯೆ ಹೊಡೆದಿರುತ್ತೀಯಲ್ಲಾ ಎಂದು ಕೇಳಿ ವಾಪಸ್ಸು ಮನೆಗೆ ಬಂದಿರುತ್ತೇವೆ. ಬೇರೆ ಏನಾಯಿತು ಎಂದು ನನಗೆ ಗೊತ್ತಾಗಿರುವುದಿಲ್ಲ. ಪೋಲಿಸರು ನನ್ನ ವಿಚಾರಣೆಯನ್ನು ಮಾಡಿ ಹೇಳಿಕೆ ಪಡೆದಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 29.01.02024 ರಂದು ಸಂಜೆ 6.30 ಗಂಟೆ ಸಮಯಲ್ಲಿ ನೀವು ಮತ್ತು ಚಾಸಾ 2 ರವರು ನಿಮ್ಮ ಮನೆಯಲ್ಲಿ ಇರುವಾಗ ಚಾಸಾ 1 ರವರು ಮನೆಯ ಬಳಿ ಗಲಾಟೆ ಶಬ್ದ ಕೇಳಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಮತ್ತು ಚಾಸಾ2 ರವರು ಹೋಗಿ ನೋಡಲಾಗಿ ಚಾಸಾ 1 ರವರು ಪೋನಿನಲ್ಲಿ ಮಾತನಾಡುತ್ತಿರುವಾಗ ಆರೋಪಿಗಳಾದ ನೇತ್ರಾವತಿ ಮತುತ ತಿಲಕ್ ಇಬ್ಬರೂ ಏಕಾಏಕಿ ಚಾಸಾ 1 ರವರನ್ನು ಕುರಿತು ನೀನು ನಮಗೆ ಬೈಯ್ಯುತ್ತಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ ಎಂದರೆ ಸಾಕ್ಷಿ ನಾನು ಹೊಡೆದಿರುವುದನ್ನು ಮಾತ್ರ ನೋಡಿರುತ್ತೇನೆ, ಆದರೆ ಬೈಯ್ಯುವುದನ್ನು ನೋಡಿರುವುದಿಲ್ಲ ಎಂದು ನುಡಿಯುುತ್ತಾರೆ. ಆರೋಪಿಗಳಾದ ನೇತ್ರಾವತಿ ಮತ್ತು ತಿಲಕ್ ಇಬ್ಬರೂ ರಾಜಮ್ಮ ರವರಿಗೆ ದೊಣ್ಣೆಯಿಂದ ಮತ್ತು ರಾಡಿನಿಂದ ಎಡ ತೋಳಿಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ಅದೆಲ್ಲಾ ನನಗೆ ಗೊತ್ತಿರುವುದಿಲ್ಲ ಹಾಗೂ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಸಮಯದಲ್ಲಿ ನೇತ್ರಾವತಿ ಮತ್ತು ತಿಲಕ್ ರವರು ಚಾಸಾ 1 ರವರಿಗೆ ಪ್ರಾಣದ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ಅದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ನೀವು ಮತ್ತು ನಿಮ್ಮ ಯಜಮಾನರಾದ ಚಾಸಾ 2ರವರು ಗಲಾಟೆ ಬಿಡಿಸಿ ಸದರಿ ಗಲಾಟೆ ವಿಷಯವನ್ನು ಚಾಸಾ 4 ರವರಿಗೆ ತಿಳಿಸಿರುತ್ತೀರಿ ಎಂದರೆ ಸಾಕ್ಷಿ ನಾವು ಹೇಳಿರುವುದಿಲ್ಲ ಚಾಸಾ 1 ರವರೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳು ದೊಣ್ಣೆ ಮತ್ತು ರಾಡಿನಿಂದ ಚಾಸಾ 1 ರವರಿಗೆ ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈಯ್ದು ಜೀವಬೆದರಿಕೆ ಹಾಕಿರುವ ವಿಚಾರ ನಿಮಗೆ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಸಿ.ಕೆ.ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಚಾಸಾ 1 ರವರು ಮತ್ತು ನೀವು ಎಷ್ಟು ವರ್ಷಗಳಿಂದ ವಿಶ್ವಾಸದಿಂದ ಇದ್ದೀರಿ ಎಂದರೆ ಸಾಕ್ಷಿ ಅವರು ನಮಗೆ ಸಂಬಂಧಿಕರಾಗಬೇಕು ಆ ಕಾರಣ 30 ವರ್ಷದಿಂದ ವಿಶ್ವಾಸದಿಂದ ಇದ್ದೇವೆ ಎಂದು ನುಡಿಯುತ್ತಾರೆ. ಚಾಸಾ 1 ರವರ ಮನೆಯಲ್ಲಿ ಏನಾದರೂ ಕಾರ್ಯಕ್ರಮಗಳು ಆದರೆ ನೀವು ಹೋಗುತ್ತೀರಿ ಹಾಗೂ ನಿಮ್ಮ ಮನೆಯಲ್ಲಿ ಏನಾದರೂ ಕಾರ್ಯಕ್ರಮಗಳು ಆದರೆ ಅವರು ಬರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯತ್ತಾರೆ. ನಿಮ್ಮ ಮನೆಯ ಸುತ್ತ ಮುತ್ತ ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿ 7 ಮನೆಗಳು ಇವೆ ಎಂದು ನುಡಿಯುತ್ತಾರೆ. ಆರೋಪಿಗಳು ನಿಮಗೆ ಸಂಬಂಧಿಕರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1ನೇ ಆರೋಪಿ ನೇತ್ರಾವತಿ ಹಾಗೂ ಚಾಸಾ 1 ರವರಿಗೆ ಸುಮಾರು ವರ್ಷಗಳಿಂದ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಹೇಗೆ ಆಯಿತು ಮತ್ತು ಯಾರು ಯಾರಿಗೆ ಹೊಡೆದಿರುತ್ತಾರೆ ಎಂದು ಹಾಗೂ ಯಾರ ಯಾರ ಕೈಯಲ್ಲಿ ಏನು ಇತ್ತು ಎಂದು ನೀವು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಕೇಳಲು ಹೋದಾಗ 2 ನೇ ಆರೋಪಿ ಚಾಸಾ 1 ರವರ ಕಪಾಳಕ್ಕೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ರಾಜಮ್ಮ ರವರು ರೋಡಿನಲ್ಲಿ ಬಿದ್ದು ಒಳ್ಳಡುತ್ತಿದ್ದರು ಎಂದೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳ ಹೆಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಹೇಳಿದ್ದು ಅದರಲ್ಲಿ ಏನೆಲ್ಲಾ ಬರೆದುಕೊಂಡಿರುತ್ತಾರೆ ಎಂದು ಗೊತ್ತಿದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರ. ನೀವು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಘಟನೆ

ನಡೆದಿರುವುದಿಲ್ಲ ನೀವು ಮತ್ತು ರಾಜಮ್ಮ ರವರು ಅನ್ಯೋನ್ಯವಾಗಿರುವುದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**